# ನಿಸರ್ಗವೇ ಗುರುವಾದ ಧ್ಯಾನಸಿದ್ಧರು

**ಡಾ. ವಿಜಯಭಾರತಿ**

ನಿಸರ್ಗದಲ್ಲಿ ದೇವರನ್ನು ಕಾಣುವ, ಪ್ರಕೃತಿಯೇ ಗುರುವಾಗಿ ಭಗವಂತನನ್ನು ಅರಸುವ ಮಾರ್ಗ ಅತ್ಯಂತ ಹಳೆಯದು. ಈ ಮಾರ್ಗದಲ್ಲಿ ನಡೆದು ಸಿದ್ಧಿಯನ್ನು ಪಡೆದ ಮಹಾತ್ಮರು ಹಲವರು. ಈ ಕುರಿತು ಬರೆದಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ಇವರು ಹಲವಾರು ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಗಳೂ ಆಗಿರುವ ಅವರು ಸಂಗೀತದಲ್ಲೂ ಪರಿಣತರು. ದೂರದರ್ಶನ, ಯೂಟ್ಯೂಬ್‌ಗಳಲ್ಲೂ ಅವರ ಅನೇಕ ಪ್ರವಚನಗಳು ಬಿತ್ತರಗೊಂಡಿವೆ.


**ಭೂ**ಮಾತೆ ಮಹಾಮಾತೆ ಆಗಿರುವಂತೆ ಪರಮಗುರುವೂ ಆಗಿದ್ದಾಳೆ. ಅವಳು ಗಿರಿಶೃಂಗಪರ್ವತಗಳನ್ನು ಹೊತ್ತ ಧಾರಿಣೀ ದೇವಿ; ನದಿ, ಹೊಳೆ, ಸಾಗರಗಳಿಗೆ ಆಶ್ರಿತಳಾದ ವಾರುಣೀದೇವಿ, ಜ್ವಾಲಾಮುಖಿಯನ್ನು ಜ್ವಲಿಸುವ ಜ್ವಾಲಿನೀದೇವಿ; ಪ್ರಾಣವಾಯು ಸಮನ್ವಿತಳು. ಗಗನಾಂಗಣ-ಗಾಮಿನಿಯೂ ಆದವಳು ಜೀವ ಕೋಟಿಗಳ ಸಂರಕ್ಷಣೆಯ ಹೊಣೆಹೊತ್ತು, ತಾನೂ ಸುತ್ತುತ್ತ, ಸೂರ್ಯನ ಸುತ್ತಲೂ ಸುತ್ತುತ್ತಾ ಹಗಲು ಇರುಳುಗಳನ್ನೂ ರೂಪಿಸುತ್ತಾ, ಸಂವತ್ಸರಗಳನ್ನು ಸೃಷ್ಟಿಸುತ್ತಾ ಕ್ಷಣವೂ ನಿಲ್ಲದೆ ಸುತ್ತುತ್ತಲೇ ಇದ್ದಾಳೆ. ಭೂಮಾತೆ ನಿರಂತರ ಮಹಾತಪಸ್ವಿನಿ.

ದಟ್ಟವಾದ ಅರಣ್ಯ ಬೇಟೆಗಾರನಿಗೆ ಬೇಟೆಗಾಗಿ ಇದೆ. ಡಕಾಯಿತರಿಗೆ ಡಕಾಯಿತಿಗಾಗಿಯೇ ಇದೆ. ಆದರೆ ತಪಸ್ವಿಗಳಿಗೆ ಆ ಅರಣ್ಯವೇ ಬ್ರಹ್ಮವಿದ್ಯಾರಣ್ಯ, ಜ್ಞಾನಾರಣ್ಯ, ನಿಸರ್ಗ ಜನನಿಯ ಸನ್ನಿಧಿಯೇ ಅವರಿಗೆ ದೈವಸನ್ನಿಧಿ. ಪ್ರಕೃತಿಮಾತೆಯ ಮಡಿಲೇ ಮಾತೃಪ್ರೇಮದ ಮಡಿಲು.

ಹಾಗೆ ನೋಡುತ್ತಾ ಹೋದರೆ ಸಂಧ್ಯಾಗಾಯತ್ರಿಯ ಉಪಾಸನೆ, ಸೂರ್ಯೋಪಾಸನೆ, ಅಗ್ನಿ ಉಪಾಸನೆ, ಇವೆಲ್ಲದರಲ್ಲಿ ನಮ್ಮ ಋಷಿಮುನಿಗಳು ಕಂಡಿರುವ ದರ್ಶನಕ್ಕೆ ಪಂಚಭೂತ ಸಮನ್ವಿತ ಪ್ರಕೃತಿಯೇ ಆಧಾರ. ಭಗವತಿ ಗಾಯತ್ರೀದೇವಿಯ ಐದು ಮುಖಗಳು ಭೂಮಿ, ಆಕಾಶ, ಸೂರ್ಯ, ಚಂದ್ರ, ಅಗ್ನಿತತ್ತ್ವಗಳನ್ನೇ ಪ್ರತಿನಿಧಿಸುತ್ತವೆ.

ಮಾನವರೂ ಈ ಪಂಚತತ್ತ್ವಗಳಿಂದಲೇ ಸೃಷ್ಟಿಯಾಗಿ, ಪೋಷಿತರಾಗಿ, ಅದರ ಸತ್ತ್ವವನ್ನು ಪ್ರತಿಫಲಿಸುತ್ತಿರುವ ಮಾಧ್ಯಮವೇ ಆಗಿದ್ದಾರೆ. ವೇದಮಂತ್ರಗಳೇ ಇದಕ್ಕೆ ಸಾಕ್ಷಿ! ನಿಸರ್ಗ ಜನನಿಯನ್ನು ಗುರುವಾಗಿ ಕಂಡಾಗಲೇ ಋಷಿತ್ವ ಪ್ರಾಪ್ತಿ, ಋಷಿವಾಣಿಯ ಉಗಮ!

ನಿಸರ್ಗ ಧ್ಯಾನಸಿದ್ಧರಲ್ಲಿ ಮೊಟ್ಟಮೊದಲಿಗೆ ಸ್ಮರಿಸಬಹುದಾದ ಪರಮಜ್ಞಾನಿ ಅವಧೂತ ದತ್ತಾತ್ರೇಯ. ಅಧ್ಯಾತ್ಮ ಸಿದ್ಧಿಯಲ್ಲಿ ಅತ್ಯಂತ ಉನ್ನತವಾದ ಸ್ಥಿತಿ ಅವಧೂತ ಸ್ಥಿತಿ. ಸದಾ ಸರ್ವದಾ ಬ್ರಹ್ಮಾನಂದದ ದಿವ್ಯ ನೆಲೆಯಲ್ಲೆ ಇರುವ ದಿವ್ಯಸ್ಥಿತಿ. ಪರಮ ಭಕ್ತನಾದ ಯದು, ''ಈ ಅವಧೂತ ಸ್ಥಿತಿ ತಮಗೆ ಬಂದದ್ದು



ಹೇಗೆ?'' ಎಂದು ಕೇಳಿದಾಗ ಅವರು ಉತ್ತರಿಸುತ್ತ ತಿಳಿಸುತ್ತಾರೆ, ''ಸೃಷ್ಟಿಯಲ್ಲಿನ ಇಪ್ಪತ್ನಾಲ್ಕು ತತ್ತ್ವಗಳೇ ಗುರುವಾಗಿ ಈ ಸ್ಥಿತಿ ನನಗೆ ಸಿದ್ಧಿಸಿದೆ'' ಎಂದು ಹೇಳುತ್ತಾರೆ. ತಮ್ಮ 'ಅವಧೂತ ಗೀತೆ'ಯಲ್ಲಿ ಈ ಸ್ಥಿತಿಯನ್ನು ವಿವರಿಸಿಯೂ ಇದ್ದಾರೆ:

> ಆಶಾಪಾಶವಿನಿರ್ಮುಕ್ತ ಆದಿಮಧ್ಯಾಂತನಿರ್ಮಲಃ ।
> ಆನಂದೇ ವರ್ತತೇ ನಿತ್ಯಂ ಅಕಾರಂ ತಸ್ಯ ಲಕ್ಷಣಮ್॥
>
> ವಾಸನಾ ವರ್ಜಿತಾ ಯೇನ ವಕ್ತವ್ಯಂ ಚ ನಿರಾಮಯಮ್
> ವರ್ತಮಾನೇಷು ವರ್ತೇತ ವಕಾರಂ ತಸ್ಯ ಲಕ್ಷಣಮ್॥
>
> ಧೂಲಿಧೂಸರಗಾತ್ರಾಣಿ ಧೂತಚಿತ್ತೋ ನಿರಾಮಯಃ
> ಧಾರಣಾಧ್ಯಾನ ನಿರ್ಮುಕ್ತೋ ಧೂಕಾರಸ್ತಸ್ಯ ಲಕ್ಷಣಮ್॥
>
> ತತ್ತ್ವಚಿಂತಾ ಧೃತಾ ಯೇನ ಚಿಂತಾಚೇಷ್ಟಾವಿವರ್ಜಿತಃ ।
> ತಮೋಹಂಕಾರ ನಿರ್ಮುಕ್ತಸ್ತಕಾರಸ್ತಸ್ಯ ಲಕ್ಷಣಂ ॥

ಎಲ್ಲಾ ಆಮಿಷಗಳಿಂದ ಮುಕ್ತನಾಗಿ, ಸದಾ ನಿರ್ಮಲಚಿತ್ತನಾಗಿ, ಹಿಂದಿನ ಮುಂದಿನ ಚಿಂತೆಯಿಲ್ಲದೆ ಇಂದಿನದರಲ್ಲೆ ನಿಶ್ಚಿಂತನಾಗಿ, ಎಲ್ಲವನ್ನೂ ಪರಿತ್ಯಾಗಮಾಡಿ ಪರಬ್ರಹ್ಮ ಅವಧೂತನಾಗಿ, ಧಾರಣ ಧ್ಯಾನ ಸ್ಥಿತಿಯನ್ನೂ ಮೀರಿದ ಬ್ರಹ್ಮಾನುಭವದ ನೆಲೆಯಲ್ಲಿ ಸ್ಥಿತನಾದವನಾಗಿ, ಪರಬ್ರಹ್ಮತತ್ವದಲ್ಲೇ ನೆಲೆನಿಂತು, ಅಜ್ಞಾ

ನದ ಅಂಧಕಾರದಿಂದ ದೂರನಾಗಿ ಜ್ಞಾನಪ್ರಕಾಶದಲ್ಲೇ ಇರುವವನು, 'ಅವಧೂತ' ಎಂಬ ನಾಲ್ಕು ಅಕ್ಷರದ ಈ ಪರಮಪದಕ್ಕೆ ದತ್ತಾತ್ರೇಯರು ತಾವೇ ನೀಡಿರುವ ಅವರ ಸ್ವಾನುಭವದ ವ್ಯಾಖ್ಯಾನ.

ಇನ್ನು ಎರಡನೆಯವರಾಗಿ ಸ್ಮರಿಸಬಹುದಾದ ಮಹಾಯೋಗಿ ಮಹರ್ಷಿ ಸತ್ಯಕಾಮ ಜಾಬಾಲಿ. ಗೌತಮ ಮಹರ್ಷಿಗಳಲ್ಲಿ ಜ್ಞಾನಾರ್ಜನೆಗಾಗಿ ಬಂದಾಗ ತಾನು ಜಾಬಾಲಿಯ ಪುತ್ರನಷ್ಟೇ! ಗೋತ್ರವಿಲ್ಲ ಎಂಬ ಸತ್ಯವನ್ನು ನಿಷ್ಠೆಯಿಂದ ತಿಳಿಸಿದಾಗ ಅವರ ಈ ನಿಷ್ಠೆಗೆ ಮೆಚ್ಚಿ ಗೋವುಗಳ ಪಾಲನೆಯ ನಿರ್ವಹಣೆಯನ್ನು ಅವರಿಗೆ ವಹಿಸಿದರು.

ಹಸಿರು ವನದಲ್ಲಿ ಆಶ್ರಮದ ಗೋವುಗಳ ಪಾಲನೆ, ಪೋಷಣೆ, ಸಂರಕ್ಷಣೆಯೇ ಸತ್ಯಕಾಮ ಜಾಬಾಲಿಯವರಿಗೆ ತಪಸ್ಸಾಯಿತು. ಪ್ರಕೃತಿಯ ಸಾನ್ನಿಧ್ಯವೇ ಅವರಿಗೆ ಗುರುಸಾನ್ನಿಧ್ಯವಾಯಿತು. ನೀಲಿ ಆಕಾಶ, ಬೆಳ್ಳಿಮೋಡ, ಬೆಳಗುವ ಸೂರ್ಯ ದಿನಕ್ಕೊಂದು ವಿನೂತನ ಸ್ವರೂಪದಿಂದ ಪ್ರಸನ್ನತೆಯನ್ನು ನೀಡುತ್ತಿದ್ದ ನಿಸರ್ಗ ಸೌಂದರ್ಯ, ಸುತ್ತೆಲ್ಲ ಬೆಳೆದು ನಿಂತ ವೃಕ್ಷ ಸಮೂಹ, ಹಕ್ಕಿಗಳ ಸಾಲು, ಸುರಿವ ಮಳೆ, ಹರಿವಹೊನಲು ರಾತ್ರಿಯಲ್ಲಿ ಮಿನುಗುತ್ತಿದ್ದ ನಕ್ಷತ್ರಸಮೂಹ ಇವೆಲ್ಲವೂ ದೈವಸ್ವರೂಪವಾಗಿಯೇ ಗೋಚರಿಸಿತು, ಧ್ಯಾನಸ್ಥಿತಿಗೆ ಕರೆದೊಯ್ದಿತು. ಸಂವಿತ್‌ಜ್ಞಾನದ ಋಷಿವಾಣಿ ಮಹರ್ಷಿ ಜಾಬಾಲಿಯವರಲ್ಲಿ ಉಗಮಿಸಿತು.

**ಪೂರ್ವಪಶ್ಚಿಮ ದಕ್ಷಿಣೋತ್ತರ ಚತುರಾದಿಕ್**
**ಪ್ರಕಾಶವಾನ್ ಇತಿ ಚತುಷ್ಕಲಾ ಪ್ರಕಾಶವಾನ್**
**ಇತಿ ಉಪಾಸ್ತೇ ಪ್ರಕಾಶವಾನ್ ಭವತಿ ॥**
**ಸೂರ್ಯಚಂದ್ರ ಅಗ್ನಿ ವಿದ್ಯುತ್ ತೇಜೋವಾನ್ ಇತಿ**
**ಚತುಷ್ಕಲಾ ತೇಜೋವಾನ್ ಇತಿ ಉಪಾಸ್ತೇ**
**ತೇಜೋವಾನ್ ಭವತಿ॥**
**ಭೂಮಿಸಾಗರ ಆಕಾಶ ದ್ಯುಲೋಕ ಅನಂತವಾನ್**
**ಇತಿ ಚತುಷ್ಕಲಾ ಅನಂತವಾನ್ ಇತಿ ಉಪಾಸ್ತೇ**
**ಅನಂತವಾನ್ ಭವತಿ ॥**
**ವಾಕ್ ಶ್ರೋತ್ರ ಚಕ್ಷುಮನಃ ಆಯತನವಾನ್ ಇತಿ ಚತುಷ್ಕಲಾ ।**
**ಆಯತನವಾನ್ ಇತಿ ಉಪಾಸ್ತೇ ಆಯತನವಾನ್ ಭವತಿ ॥**

ಮುಂದಿನ ಋಷಿವರೇಣ್ಯರಾಗಿ ನಾವು ಸ್ಮರಿಸಬಹುದಾದವರು ಮಹರ್ಷಿ ಮಹೀದಾಸ ಐತರೇಯ, ಹೆಸರೇ ಸೂಚಿಸುವಂತೆ ಅವರು ಇತರೇ ಜನಾಂಗದ ಸ್ತ್ರೀಯಲ್ಲಿ ಜನಿಸಿದವರು. ಯಾವ ಗುರುಕುಲದಲ್ಲಿಯೂ ಜ್ಞಾನಾರ್ಜನೆಗೆ ಆಶ್ರಯ ದೊರೆಯದೆ ಹೋದಾಗ ತಮ್ಮ ತಾಯಿಯ ಆದೇಶದಂತೆ ಭೂಮಾತೆಯನ್ನೇ ಗುರುವಾಗಿ ಆರಾಧಿಸಿದರು, ಮಹೀದಾಸರಾದರು. ನಮಗೆ 'ಹರಿದಾಸ' ಪದದ ಪರಿಚಯವಿದೆ ಆದರೆ 'ಮಹೀದಾಸ' ಪದ ಅಷ್ಟಾಗಿ ಪರಿಚಯವಿಲ್ಲ! ನಿಸರ್ಗ ಜನನಿಯ ಉಪಾಸಕರೆಲ್ಲ ಮಹೀದಾಸರೇ ! ಪ್ರಕೃತಿಯ ಸಾನ್ನಿಧ್ಯದಲ್ಲಿ ಐತರೇಯ ಮಹರ್ಷಿ ಪಂಚಭೂತ ಸ್ವರೂಪದ ಪೂರ್ಣಾನುಭವವನ್ನು ತಮ್ಮ ತಪೋನಿಷ್ಠೆಯಿಂದ ಪಡೆದರು. ಇದನ್ನು 'ಪಂಚಾತ್ಮ ಸಂಕ್ರಮಣ ಸಿದ್ಧಿ' ಎಂದೇ ಸಾಧಕರು ಹೆಸರಿಸಿದ್ದಾರೆ. ಭೂತತ್ತ್ವವನ್ನು ಧ್ಯಾನಿಸುವಾಗ ಅದರ ಧಾರಣಶಕ್ತಿ, ಸೃಜನಶಕ್ತಿ, ಸಂರಕ್ಷಣ ಶಕ್ತಿ, ಸೌರಭಶಕ್ತಿ ಹಾಗೂ ಸಂಪತ್ತಿನ ಆಗರವಾದ ಸ್ವರೂಪ ಧ್ಯಾನದಿಂದ ಸಾಧಕನ ಮನೋಭಾವದಲ್ಲಿಯೂ ಆ ಎಲ್ಲ ವಿಶೇಷ ಪ್ರಾಪ್ತವಾಗುತ್ತದೆ. ಅದೇ ರೀತಿ ಜಲತತ್ತ್ವದ ಪಾರದರ್ಶಕತೆ, ನಿರ್ಮಲತೆ ತನ್ನ ಪಾತ್ರವನ್ನು ತಾನೇ ನಿರ್ಮಿಸಿಕೊಂಡು ಏಕಮುಖವಾಗಿ ಹರಿಯುವ ಸಂಕಲ್ಪಶಕ್ತಿ, ಅಗ್ನಿತತ್ತ್ವದಲ್ಲಿನ ಪ್ರಜ್ವಲತೆ, ದಹನಶಕ್ತಿಯ ಪಕ್ವತೆ ಈ ಮೂರೂ ತತ್ತ್ವಗಳಿಗೆ ಚೈತನ್ಯದ ಪ್ರಬಲ ಶಕ್ತಿಯಾಗಿ ಹರಿಯುವ ವಾಯುವಿನ ಪ್ರಾಣಶಕ್ತಿ, ಎಲ್ಲ ತತ್ತ್ವಗಳಿಗೆ ಉಗಮಸ್ಥಾನವಾದ ಮತ್ತು ವಿಲೀನ ಸ್ಥಾನವಾದ ಆಕಾಶತತ್ತ್ವ ವಿಶ್ವಚೈತನ್ಯದ ಈ ವಿಶ್ವರೂಪದ ತುರೀಯ ಪ್ರಜ್ಞೆಯ ದರ್ಶನ ಐತರೇಯ ಮಹರ್ಷಿಗಳಿಗೆ ಸಿದ್ಧಿಸುತ್ತದೆ. ಆ ಸಿದ್ಧಿಯೇ ಋಷಿವಾಣಿಯಾಗಿ ಉಗಮಿಸುತ್ತದೆ.

**ಆತ್ಮಾ ಯೇನ ವಾ ಪಶ್ಯತಿ, ಶೃಣೋತಿ, ವ್ಯಾಹರತಿ**
**ಹೃದಯಂ ಮನಃ ಧೃತಿ, ಸ್ಮೃತಿಃ, ಮೇಧಾಶ್ಚ**
**ಸಂಕಲ್ಪಃ ಪ್ರಜ್ಞಾನೇ ಭವತಿ । ಸರ್ವಲೋಕಃ**
**ಸರ್ವ ಪಂಚ ಭೂತಾನಿ ಸ್ಥಾವರಂ ಜಂಗಮಂ ಸರ್ವಂ**
**ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನಂ ಬ್ರಹ್ಮ ॥**

ನಿಸರ್ಗೋಪಾಸಕರ ಸಾಲಿನಲ್ಲಿ ನಾವು ಭಕ್ತಿಗೌರವದಿಂದ ನೆನೆಯಬಹುದಾದ ಮಹಾಚೇತನರು ಭಗವಾನ್ ಗೌತಮ ಬುದ್ಧ. 'ಜಗವೆಲ್ಲ ಮಲಗಿರಲು ಇವನೊಬ್ಬ ಎದ್ದ' ಎನ್ನುತ್ತದೆ ಕವಿವಾಣಿ. ಎಲ್ಲ ಪ್ರಾಪಂಚಿಕ ಭೋಗವಿಲಾಸವನ್ನೆಲ್ಲ ಪರಿತ್ಯಾಗ ಮಾಡಿ, ಶಾಶ್ವತ ಶಾಂತಿ, ಶಾಶ್ವತಾನಂದವನ್ನರಸಿ ಸಿದ್ಧಿ ಪಡೆದು ಬುದ್ಧನಾದ. ಅಲ್ಲರಸಿ, ಇಲ್ಲರಸಿ ಎಲ್ಲೂ ಪರಮಶಾಂತಿಯನ್ನು ಪಡೆಯಲಾಗದೆ ತಳಮಳಿಸುತ್ತಿದ್ದಾಗ ಗಯಾಕ್ಷೇತ್ರ ಸಿದ್ದಾರ್ಥ ಗೌತಮನನ್ನು ಕೈಬೀಸಿ ಕರೆಯಿತು. ಅದೇ ಭೂಮಾತೆಯ ಮಮತೆಯ ಕರೆಯಾಯಿತು. ತನ್ನ ಶಾಖೋಪಶಾಖೆಗಳನ್ನು ಸುತ್ತೆಲ್ಲ ಹರಡಿ ಸೊಂಪಾಗಿ ಬೆಳೆದು ನಿಂತಿದ್ದ ತಣ್ಣೆಳಲಿನ ಅರಳೀ ವೃಕ್ಷವೇ ಗೌತಮನಿಗೆ ಗುರುವಾಗಿ ಬೋಧಿವೃಕ್ಷವಾಯಿತು. ಶಾಶ್ವತ ಆತ್ಮ ಶಾಂತಿಯ ಆತ್ಮಾನಂದದ ದಿವ್ಯಾನುಭವದ ಸಿದ್ಧಿಯನ್ನು ನೀಡಿ 'ಬುದ್ಧ'ನನ್ನಾಗಿಸಿತು. ಅರಳಿವೃಕ್ಷದ ಸಹಸ್ರಾರು ಎಲೆಎಲೆಗಳಲ್ಲಿ ಭೂತಳದಲ್ಲಿನ ತಾಯಿಬೇರಿನಿಂದ ವೃಕ್ಷದ ಅಗ್ರದವರೆಗೆ ಹಗಲಿರುಳು ನಿರಂತರವಾಗಿ ಹರಿಯುತ್ತಿರುವ ಪ್ರಕೃತಿಮಾತೆಯ ಚೈತನ್ಯದ ಧಾರೆ ಪ್ರಾಣಧಾರೆಯಾಗಿ, ವಿದ್ಯುತ್‌ಧಾರೆಯಾಗಿ, ಮೈತ್ರಿಧಾರೆಯಾಗಿ ಹರಿಯುತ್ತಿರುವುದನ್ನು 'ಅನಿಮಿಷಚೈತ್ಯ'ದ ಭೂಮಿಕೆಯಿಂದ ಬುದ್ಧದರ್ಶನ ಮಾಡಿದ. ಅದೇ ಅವನ ಶರೀರದ

ರೋಮರೋಮದಲ್ಲಿ ಸುತ್ತಲಿನ ಎಲ್ಲ ದಿಕ್ಕುಗಳಲ್ಲಿ ಪರಮ ಪ್ರಕಾಶದ ಕಾಂತಿಧಾರೆಯೇ ವ್ಯಾಪ್ತವಾಗಿರುವುದನ್ನು ಹುಣ್ಣಿಮೆಯ ರಾತ್ರಿಯಲ್ಲಿ ಕಂಡ! ಪ್ರಾಣಶಕ್ತಿ ಮತ್ತು ಪ್ರಜ್ಞಾಶಕ್ತಿಯ ಸಂಗಮವಾಗಿ ಸ್ವತಃ ತಾನೇ ತಂಬೆಳಕಿನ ಮನುಷ್ಯಚಂದ್ರನಾದ. ಬುದ್ಧತ್ವದ ಸಿದ್ಧಿಯ ನೆಲೆಯಿಂದ ಬೋಧೆಯ ವಾಣಿ ಉಗಮಿಸಿತು.

**ಅಭಿಜ್ಞೇಯಂ ಅಭಿಜ್ಞಾತಂ । ಭಾವೇ ತಬ್ಬಂಚ ಭಾವಿತಂ**
**ಪಹಾತಬ್ಬಂ ಪಹೀನಂ ಮೇ ತಸ್ಮಾ ಬುದ್ಧೋಽಸ್ಮಿ ಸಿದ್ಧೋಽಸ್ಮ್ಯಹಂ**
**ಚಕ್ಕುಂ ಉದಪಾದಿ ಜ್ಞಾನಂ ಉದಪಾದಿ ಪ್ರಜ್ಞಾ ಉದಪಾದಿ**
**ವಿಜ್ಞಾ ಉದಪಾದಿ ಆಲೋಕೋ ಉದಪಾದಿ ॥**

'ತಿಳಿಯಬೇಕಾದುದನ್ನು ತಿಳಿದುಕೊಂಡೆ, ಹೊಳೆಸಿಕೊಳ್ಳಬಹುದಾದ್ದನ್ನು ಹೊಳೆಸಿಕೊಂಡೆ, ಕಳೆದುಕೊಳ್ಳಬೇಕಾದದ್ದನ್ನು ಕಳೆದುಕೊಂಡೆ. ದಿವ್ಯದೃಷ್ಟಿ ಪ್ರಾಪ್ತವಾಯಿತು, ದಿವ್ಯಜ್ಞಾನ ಪ್ರಾಪ್ತವಾಯಿತು, ದಿವ್ಯವಾದ ಬ್ರಹ್ಮವಿದ್ಯೆ ಪ್ರಾಪ್ತವಾಯಿತು, ವಿನೂತನ ವಿಶ್ವರೂಪದ ವಿಶೇಷ ಲೋಕವನ್ನು ದರ್ಶಿಸಿದೆ ಬುದ್ಧನಾದೆ.'

ನಿಸರ್ಗ ಜನನಿಯ ಕೃಪೆಯಿಂದ ಮೊದಲು ರಾಜನಾಗಿದ್ದವನು ಶಾಂತಿಯ ಭಿಕ್ಷುವಾಗಿದ್ದ, ಶಾಂತಿಯ ಭಿಕ್ಷುವಾದ ಮೇಲೆ, ಶಾಂತಿ ಸಾಮ್ರಾಜ್ಯಕ್ಕೆ ರಾಜನಾದ ಗೌತಮ ಬುದ್ಧ.

ಭಗವತಿ ಭೂಮಾತೆಯ ಉಪಾಸಕರ ಪರಂಪರೆ ಶತಮಾನಗಳ ಹಿಂದಷ್ಟೇ ಇದ್ದದ್ದಲ್ಲ ಇಂದಿಗೂ ಇದೆ, ಮುಂದೆಯೂ ಇರುತ್ತದೆ. ಇತ್ತೀಚಿನವರಾದ, ತಿರುವಣ್ಣಾಮಲೈನಲ್ಲಿದ್ದ ಪರಮಯೋಗಿ ಶ್ರೀರಮಣಮಹರ್ಷಿಗಳಿಗೆ ಅರುಣಾಚಲ ಗಿರಿಯೇ ಗುರುವಾಯಿತು; ಕಾವೇರಿ ತೀರದ ತಪೋವನಗಳಲ್ಲಿ ಏಕಾಂತವಾಗಿ ಮೌನವಾಗಿದ್ದ ಶ್ರೀ ಸದಾಶಿವ ಬ್ರಹ್ಮೇಂದ್ರರಿಗೆ ಕಾವೇರಿ ತಾಯಿಯೇ ಗುರುವಾದಳು. ಹಿಮಾಲಯದ ಗೋಮುಖ ಗಂಗೋತ್ರಿಯ ಗಿರಿಶೃಂಗದಲ್ಲಿ ಉಗಮಿಸಿದ ಗಂಗಾಮಾತೆಯೇ ಸ್ವಾಮಿ ತಪೋವನಾನಂದರಿಗೆ ಗುರುವಾದಳು. ಬಿಳಿಗಿರಿರಂಗನ ಬೆಟ್ಟದ ಅರಣ್ಯವೇ ಸ್ವಾಮಿ ನಿರ್ಮಲಾನಂದರಿಗೆ ಗುರುವಾಯಿತು.

ಶ್ರೀರಾಮಕೃಷ್ಣ ಪರಮಹಂಸರಿಗೆ ನೀಲಿ ಆಕಾಶದ ಮೋಡಗಳ ನಡುವೆ ಹಾಯ್ದುಹೋದ ಪಕ್ಷಿಗಳ ಸಾಲೇ ಮೊಟ್ಟಮೊದಲಿಗೆ ಮಹಾಭಾವದ ಸಮಾಧಿಸ್ಥಿತಿಯ ಅನುಭವ ನೀಡಿತು.

ಸ್ವಾಮಿ ವಿವೇಕಾನಂದರು ಯುವಯತಿಯಾಗಿ ಹಿಮಾಲಯದ ಗಿರಿಶ್ರೇಣಿಗಳಲ್ಲಿ ಪರಿವ್ರಾಜಕರಾಗಿ ಸಂಚರಿಸುತ್ತಿದ್ದಾಗ ಉತ್ತರಾಖಂಡದ ಶೀತಲ್‌ಕೇತ್‌ನ ಕೋಷಿನದಿಯ ಘಾಟ್‌ನಲ್ಲಿ ಅರಳೀ ವೃಕ್ಷದಡಿಯಲ್ಲಿ ಅಲ್ಲಿನ ಪ್ರಶಾಂತತೆಗೆ ಮನಸೋತು ಬಹುಕಾಲ ಧ್ಯಾನಸ್ಥರಾಗಿರುತ್ತಾರೆ. ಸಾಂತತೆ ಅನಂತತೆಯಲ್ಲಿ ಪ್ರಜ್ಞೆ-ತುರೀಯ ಪ್ರಜ್ಞೆಯಲ್ಲಿ, ದ್ವೈತ- ಅದ್ವೈತದ ನೆಲೆಯಲ್ಲಿ ವಿಲೀನವಾದ ಅಪೂರ್ವ ಅನುಭವ ಪಡೆಯುತ್ತಾರೆ. ಈ ದರ್ಶನಾನುಭವವೇ ಮುಂದೆ ಹಲವು ಪ್ರವಚನಗಳಲ್ಲಿನ ತತ್ತ್ವಬೋಧನೆಗಳಿಗೆ ಪ್ರೇರಣೆಯಾಯಿತು.

ಮಾನವನ ಶರೀರವಷ್ಟೇ ಅಲ್ಲದೆ ಮನಸ್ಸು, ಬುದ್ಧಿ, ಚಿತ್ತಗಳಲ್ಲಿಯೂ ಪ್ರಕೃತಿಯ ಪಂಚತತ್ತ್ವಗಳ ಪ್ರಭಾವ ಪರಿಣಾಮ ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ಛಾಂದೋಗ್ಯ ಉಪನಿಷತ್ತಿನ ಋಷಿವರ್ಯರು ತಮ್ಮ ತಪಸ್ಸಿನ ಅನುಸಂಧಾನದಿಂದ ಈ ಐದು ಪಂಚತತ್ತ್ವಗಳ ಸೂಕ್ಷ್ಮ ಎಳೆಗಳನ್ನು ಪರಿಭಾವಿಸಿದ್ದಾರೆ. ಭೂತತ್ತ್ವದ ಸ್ಥೂಲರೂಪ ನಮ್ಮ ದೇಹದಲ್ಲಿ ಮಾಂಸರೂಪದಲ್ಲಿ, ಸೂಕ್ಷ್ಮರೂಪದಲ್ಲಿ ಪ್ರಾಣವಾಗಿದೆ. ಅಗ್ನಿತತ್ವ ಸ್ಥೂಲರೂಪದಲ್ಲಿ ಅಸ್ಥಿಯಾಗಿ ಸೂಕ್ಷ್ಮರೂಪದಲ್ಲಿ ಕಂಠದ ಸ್ವರವಾಗಿದೆ, ಅದೇ ರೀತಿ ಅಂತರಂಗದ ಭಾವನೆ ಚಿಂತನೆಗಳಲ್ಲೂ ಇದರ ಪ್ರಭಾವವಿದೆ. ಪ್ರಾಣ ಮತ್ತು ಪ್ರಜ್ಞೆಗಳ ಸಂಗಮದಿಂದ ವಿದ್ಯುದಗ್ನಿ ಉತ್ಪನ್ನವಾಗಿ ನರನಾಡಿಗಳಲ್ಲಿ ಅದು ಪ್ರವಹಿಸುತ್ತದೆ. ಪವಿತ್ರ, ಪ್ರಸನ್ನ, ಪ್ರಶಾಂತ ಪ್ರಕೃತಿಯ ಅನುಸಂಧಾನದಿಂದ ಅದು ಶಕ್ತಿಯುತವಾಗುತ್ತದೆ, ಕಾಂತಿಯುತವಾಗುತ್ತದೆ. ನರಶರೀರ ಭಗವತ್ತನುವಾಗಿ, ದೈವೀಕ್ಷೇತ್ರವಾಗಿ ಪರಿವರ್ತಿತವಾಗುತ್ತದೆ. ಅಜ್ಞಾನಿಗೆ ಈ ಶರೀರ ಒಂದು ಸೆರೆಮನೆ, ಭೋಗಿಗೆ ಅರಮನೆ, ಯೋಗಿಗೆ ಗುರುಮನೆ ಎಂದು ತಿಳಿದವರ ಮಾತಿದೆ. ಎಲ್ಲ ದೈವೀಪುರುಷರ ದಿವ್ಯಜೀವನದಲ್ಲಿ ನಿಸರ್ಗ ಜನನಿ ಗುರುವಾಗಿ ದಿವ್ಯಧಾಮದೆಡೆಗೆ ನಡೆಸಿದ್ದಾಳೆ. ಶ್ರೀರಾಮನ ಪಂಚವಟಿ, ಶ್ರೀಕೃಷ್ಣನ ಬೃಂದಾವನ, ಭಗವಾನ್ ಬುದ್ಧನ ಚೈತ್ರವನ, ಆಮ್ರವನ, ವೇಣುವನ, ಶ್ರೀರಾಮಕೃಷ್ಣರ ಗಂಗಾತೀರದ ದಕ್ಷಿಣೇಶ್ವರದ ಪಂಚವಟಿ, ಬಿಲ್ವವೃಕ್ಷ – ಆಲೋಚಿಸುತ್ತಾ ಹೋದರೆ ನಿಸರ್ಗದಲ್ಲಿ ಮಹಾನುಭಾವರು, ಮಹಾನುಭಾವರಲ್ಲಿ ನಿಸರ್ಗ: ಇದೇ ವಾಸ್ತವ ಸತ್ಯ.

ಆದರೆ ಇಂದಿನ ಸ್ಥಿತಿ ಬೇರೆ ದಿಕ್ಕಿನಲ್ಲಿಯೇ ಸಾಗಿದೆ. ಮಾನವ ನಿಸರ್ಗದಿಂದ ದೂರವಾಗಿ ಕಾಂಕ್ರೀಟ್ ಕಟ್ಟಡಗಳ ನಡುವೆಯೇ ಬಂಧಿತನಾಗಿದ್ದಾನೆ. ನಿಸರ್ಗಶೋಷಣೆ, ನಿರ್ಲಕ್ಷ್ಯ ದುರುಪಯೋಗ, ಸ್ವಾರ್ಥ ಉದ್ದೇಶದ ಅನುಕೂಲ ಇವೇ ಹೆಚ್ಚಾಗಿ ಮಾನವೀಯತೆ ಮಾಲಿನ್ಯಕ್ಕೆ ಒಳಗಾಗಿದೆ. ಇದುವರೆಗೆ ನಾವು ಚಿಂತನೆ ಮಾಡಿದ ನಿಸರ್ಗ ಧ್ಯಾನಸಿದ್ಧರ ಪವಿತ್ರ ಜೀವನದ ಆದರ್ಶ ನಮ್ಮ ಕಣ್ತೆರಸಲಿ, ಬದುಕಿಗೆ ಸಾರ್ಥಕತೆಯ ಪವಿತ್ರತೆ ನೀಡಲಿ, ಭೂಮಾತೆ ನಮ್ಮನ್ನೆಲ್ಲ ಗುರುವಾಗಿ ಕಾಂತಿಪಥದತ್ತ, ಶಾಂತಿಪಥದತ್ತ ಮುನ್ನಡೆಸಲಿ.

**ಸಪ್ತದ್ವೀಪ ಧಾರಿಣ್ಯೈ ಚ ವಿದ್ಮಹೇ**
**ಸಪ್ತಸಾಗರ ಸ್ವಾಮಿನ್ಯೈ ಚ ಧೀಮಹಿ**
**ತನ್ನೋ ವಸುಂಧರಾ ಪ್ರಚೋದಯಾತ್ ॥**